ಪ್ರಮೋಶನ್ನಾ!... ಸೊ ವಂಡರ್‌ಫುಲ್' ಜೋಕ್‌ನಂತೆ ಹರಿದ ನನ್ನ ಮಾತಿನಲ್ಲಿ ಅಸೂಯೆಯ ಹರಿತ. ಅದನ್ನರಿತ ಅವನ ಹಾರ್ಟ್‌ನಲ್ಲಿ ಜಗಿತ. ಅಸೂಯೆ, ಅತೃಪ್ತಿ, ಅಸಹಿಷ್ಣುತೆ, ವಿನಾಕಾರಣ ಕೋಪ ತಾಪ ಆರೋಗ್ಯಕರ ಪ್ರೇಮದ ಲಕ್ಷಣವೆಂಬುದವನ ಅನಾಲಿಸಸ್. ಅವನ ಪ್ರೇಮದ ಬಲೆಗೆ ಬಿದ್ದ ಮೀನಿನಂತಾಗಿ ಅಧೀರತೆ ಕಾಡುವಾಗ ವಿಹ್ವಲಳಾಗುವೆ.

ಮನೆಗೆ ಬಂದರೂ ವಿಕ್ಷಿಪ್ತತೆ. ಅಡಿಗೆಯ ಉಪ್ಪುಖಾರದ ಪ್ರಮಾಣದಲ್ಲಿ ಏರುಪೇರು. ಮಾಡುವ ಕೆಲಸದಲ್ಲಿ ಅನಾಸಕ್ತಿ. 'ನೆಟ್ಟಗೆ ಜ್ಞಾನ ಇಟ್ಕೊಂಡು ಬದುಕು ಮಾಡೇ' ಮನೆಯವರ ಆಕ್ಷೇಪಣೆ. ಕಿಶೋರನಿಗೆ ನನ್ನ ಬದುಕಿನ ನಿಜಾಂಶ ತಿಳಿದಿದೆಯೆ? ತಿಳಿದೂ ನನ್ನನ್ನು ಮುತ್ತಿಕೊಂಡಿದ್ದಾನೆಯೇ? ತಿಳಿದರೆ ಅವನ ಪ್ರತಿಕ್ರಿಯೆ ಹೇಗಿದ್ದೀತು ಎಂಬ ಹಪಹಪಿಕೆ, ತಿಳಿದ ನಂತರ ಅವನು ದೂರವಾದರೆ ಎಂಬ ಹಳಹಳಿಕೆ. ತಿಳಿದ ಮೇಲೂ ಇನ್ನೂ ಹತ್ತಿರವಾದರೆ ನಾನು ತೆಗೆದುಕೊಳ್ಳಬೇಕಾದ ಸೂಕ್ತ ನಿರ್ಧಾರದ ಬಗ್ಗೆ ಮನವೋ ಕೆಸರಲ್ಲಿ ಹೂತ ಕಂಬ. ನನ್ನ ಬಗ್ಗೆ ನನಗೇ ಅಸಹ್ಯ. ಮನ ರಾಡಿಯಾಗುತ್ತದೆ. ಇಂತಹ ಅಯೋಮಯದ ದಿನಗಳಲ್ಲೇ ಲಂಚ್‌ಗೆ ಬರಲು ಒತ್ತಾಯಿಸಿದ ಕಿಶೋರನ ಆಫರ್‌ನ ಅಳೆದು ತೂಗಿ ಒಪ್ಪಿಕೊಳ್ಳುತ್ತೇನೆ. ನೈತಿಕತೆಯು ನನ್ನನ್ನು ನಿತ್ರಾಣ ಮಾಡುವಾಗ ಒಳಗೇ ಗಟ್ಟಿಯಾಗುತ್ತೇನೆ. ತಾನಾಗಿಯೇ ಬಂದ ಒಳ್ಳೆ ಅವಕಾಶವನ್ನು ನೈತಿಕತೆ, ಪ್ರಾಮಾಣಿಕತೆ, ಪಾವಿತ್ರತೆ ಎಂದೆಲ್ಲಾ ಅಂಜಿಯೇ ಪುರಾಣಗಳ ಕಾಲದಿಂದಲೂ ಹೆಣ್ಣು ಹಿಂದುಳಿದಿರುವುದು. ಹಿಂಜರಿಯದೆ ಅವನ ಕರೆಗೆ ಓಗೊಡುವೆ.

★★★

ನಾರ್ಥ್ ಸ್ಟೈಲ್ ಊಟಕ್ಕೆ ಹೇಳಿ, ನಿಧಾನವಾಗಿ ಟೊಮೆಟೊ ಸೂಪ್ ಸವಿಯುವಾಗ ನಾನು ತುಂಬಾ ಸೆಖೆಯೆಂದು ನಟಿಸುತ್ತಾ ರವಿಕೆ ಒಳಗೆ ಹುದುಗಿದ್ದ ಮಾಂಗಲ್ಯವನ್ನು ಬೇಕೆಂದೇ ಈಚೆ ತೆಗೆದು ಹೊರಗೆ ಹಾಕಿಕೊಳ್ಳುತ್ತೇನೆ. ಅವನು ಶಾಕ್‌ಗೆ ಒಳಗಾಗುವುದನ್ನೇ ಅನಪೇಕ್ಷೆಯಿಂದ ದಿಟ್ಟಿಸುತ್ತೇನೆ. ಅವನದ್ದದೇ ಟಿಪಿಕಲ್ ನಗೆ! 'ಎಸಿ ರೂಮಲ್ಲಿ ಎಂಥ ಸೆಖೇರಿ?... ಯು ಸೀ, ಬೇಸಿಗೆಯಲ್ಲಿ ಬಿಗಿಯಾಗಿ ಸೀರೆ ಉಟ್ಟು ಟೈಟಾದ ರವಿಕೆ ತೊಡೋ ಬದ್ಲು ಲೂಸಾದ ಚೂಡಿದಾರ್ ಬೆಸ್ಟ್ ಕಣ್ರಿ,' ಉಪದೇಶ ಮಾಡುತ್ತಾನೆ. ನನಗೋ ನಾಲಿಗೆಯೆಲ್ಲಾ ಕಹಿಕಹಿ. ನೇರವಾಗಿಯೇ ಪ್ರಶ್ನಿಸಿಬಿಡುವೆ. 'ನನಗೆ ಮದುವೆಯಾಗಿದೆಯೆಂದು ಗೊತ್ತಾ ನಿಮ್ಗೆ?' ತಲೆಯಾಡಿಸುತ್ತಾ ನಗುತ್ತಾನೆ. ನನಗೀಗ ದೊಡ್ಡ ಶಾಕ್. ಬೆಂಕಿಗೆ ಬಿದ್ದ ಪಾರಿವಾಳದಂತೆ ಜಿಗಿದು ಹಾರಲು ಚಡಪಡಿಸುತ್ತೇನೆ. 'ವಾಟ್ ಈಸ್ ದೇರ್?... ಈಗ ಇದೆಲ್ಲಾ ಕಾಮನ್ ಬಿಡ್ರಿ. ಫ್ರೆಂಡ್ಸ್ ಹೆಂಡತಿಯರನ್ನ ಶೇರ್ ಮಾಡಿಕೊಳ್ಳೋದು, ವಿಥೌಟ್ ಮ್ಯಾರೇಜ್ ಲಿವ್ ಇನ್ ಟುಗೆದರ್ ಬೈಸೆಕ್ಸುಯಲ್ ಇನ್ನೂ ಏನೇನೋ ಸೊಸೈಟಿನಲ್ಲಿ ನಡೀತಿದೆ ರಂಜನಿದೇವ್. ಇನ್ ಮೈ ವ್ಯೂ ಸೆಕ್ಸ್ ಅಪಚಾರವೂ ಅಲ್ಲ ಅಪರಾಧವೂ ಅಲ್ಲ. ಅವರವರ ಲೈಕಿಂಗ್ಸ್ ಅಷ್ಟೆ' ವಾರೆನಗೆ ಬೀರಿ ಕೆಣಕುತ್ತಾನೆ. ಮೈಯಲ್ಲಿ ಕಿಚ್ಚು ದಿಗ್ಗನೆ ಹತ್ತಿಕೊಳ್ಳುತ್ತದೆ. 'ಓಹೋ! ನಿಮ್ಮದು ಯಾವ ಟೈಪ್ ಲವ್ವೋ?' ಸುಟ್ಟುಬಿಡುವ ಪರಿ ನೋಡುವೆ. 'ಥುತ್... ಲವ್ವು ಗಿವ್ವು ಮಣ್ಣಾಂಗಟ್ಟಿ ಬಿಟ್ಹಾಕ್ರಿ. ದಾಹ ಉಂಟಾದಾಗ ಯಾವ ಕೆರೆ ನೀರಾದ್ರೇನ್ರಿ? ನನಗೆ ನೀವು ಬೇಕು ಅಷ್ಟೆ. ನನ್ನ ಜೊತೆಗಿನ ಒಂದೇ ಡಿನ್ನರ್‌ಗೆ ಬೆಡ್ ಹಂಚಿಕೊಂಡವರುಂಟು. ನೀವೇ ನೋಡಿ ತುಂಬಾ ಸತಾಯಿಸಿದ್ದು. ಕರೆದರೆ ಬಂದು ಮೈಮೇಲೆ ಬೀಳೋರ್ಗಿಂತ ಮೊಂಡು ಹುಡುಗಿರೇ ನಂಗೆ ತುಂಬಾ ಇಷ್ಟ' ಗುಳು ಗುಳು ನಗುತ್ತಾನೆ. 'ನಾನು ಹುಡುಗಿಯಲ್ಲ... ಒಂದು ಮಗುವಿನ ತಾಯಿ' ಮೈಯೆಲ್ಲಾ ಪಾದರಸವಾಗುತ್ತೆ. 'ಐ ನೊ ಯುವರ್ ಫ್ಯಾಮಿಲಿ ಡಿಟೇಲ್ಸ್ ರಂಜನಿದೇವ್.